# ಇದೇನಿದು ಜನಸಾಗರ!



ದಕ್ಷಿಣ ಆಫ್ರಿಕಾ ಮೂಲದ ಕೆವಿನ್, ದಲೀನ್ ದಂಪತಿ ಮಕ್ಕಳಾದ ಜೋಶುವ ಮತ್ತು ಲೀನೆ ಅವರೊಂದಿಗೆ..

'ಬೆಂಗಳೂರಿಗೆ ಬಂದಾಗ ಮೊದಲ ಅಚ್ಚರಿ ಎಂದರೆ ಇಲ್ಲಿನ ಜನಸಂಖ್ಯೆ. ಎಲ್ಲಿ ನೋಡಿದರೂ ಜನಸಾಗರ. ನಾವು ನೋಡಿದ ಬೇರೆ ಎಲ್ಲ ದೇಶಗಳಲ್ಲಿ ಇಷ್ಟೊಂದು ಜನದಟ್ಟಣೆ ಇಲ್ಲ.. ' ಎನ್ನುತ್ತಲೇ ಜನಸಂಖ್ಯೆಯ ಹೆಚ್ಚಳದ ಬಗ್ಗೆ ಅಚ್ಚರಿ, ಕಳವಳ ಎರಡನ್ನೂ ವ್ಯಕ್ತಪಡಿಸುತ್ತಾರೆ ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಬಂದ ಕೆವಿನ್ ಮತ್ತು ದಲೀನ್ ದಂಪತಿ.

ಜನಸಂಖ್ಯೆ ಬಗ್ಗೆ ಮಾತು ಮುಂದುವರಿಸುತ್ತಾ, ಭಾರತದ ಯಾವುದೇ ಭಾಗಕ್ಕೆ ಹೋದರೂ ಜನಸಂಖ್ಯೆ ಹೆಚ್ಚು. ಇದು ನಮಗಷ್ಟೇ ಅಲ್ಲ, ಬೆಂಗಳೂರಿಗೆ ಬೇರೆ ಬೇರೆ ದೇಶಗಳಿಂದ ಬಂದ ವಿದೇಶೀಯರಿಗೂ ಅಚ್ಚರಿ ತರುವ ವಿಚಾರವೇ ಆಗಿದೆ. ಜನ ಹೆಚ್ಚಾದ ಹಾಗೆ ಟ್ರಾಫಿಕ್ ಕೂಡ ಮಿತಿ ಮೀರಿದೆ. ಇದಂತೂ ಸಹಿಸಲಾಗುತ್ತಿಲ್ಲ ಎಂಬ ಅಸಮಾಧಾನದ ಜತೆಗೆ ಬೆಂಗಳೂರಿನ ಜನಜೀವನ, ಜೀವನಶೈಲಿ, ಭಾಷೆ, ಸಂಸ್ಕೃತಿಯ, ಊಟೋಪಚಾರಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನೂ ಸೇರಿಸುತ್ತಾರೆ ಖಾಸಗಿ ಕಂಪೆನಿಯೊಂದರಲ್ಲಿ ದಕ್ಷಿಣ ಏಷ್ಯಾ ವಲಯದ ಪ್ರಾಂತೀಯ ನಿರ್ದೇಶಕರಾದ ಕೆವಿನ್.

'ರಸ್ತೆಯಲ್ಲಿ ಓಡಾಡುವ ಸಾವಿರಾರು ಕಾರುಗಳು, ಆಟೊ, ಬೈಕ್‌ಗಳು, ರಸ್ತೆ ಬದಿಯಲ್ಲಿ ಮಲಗುವ, ಓಡಾಡುವ ಹಸು ಕರುಗಳು, ಬಡಾವಣೆಯ ಸುತ್ತ ತಿರುಗಾಡುವ ನಾಯಿಗಳು.. ಇವರೊಂದಿಗೆ ಜನರ ಒಡನಾಟ ನಮಗೆ ಒಂದು ರೀತಿಯ ವಿಭಿನ್ನ ಅನುಭವ ನೀಡುತ್ತಿವೆ' ಎನ್ನುತ್ತಾರೆ ಕೆವಿನ್ ಅವರ ಪತ್ನಿ ದಲೀನ್.

ಕೆವಿನ್ ಮತ್ತು ದಲೀನ್ ತಮ್ಮ ಇಬ್ಬರು ಮಕ್ಕಳಾದ ಜೋಶುವ ಮತ್ತು ಲೀನೆ ಅವರ ಜತೆ ದಕ್ಷಿಣ ಆಫ್ರಿಕಾದಿಂದ 2012ರಲ್ಲಿ ಬೆಂಗಳೂರಿಗೆ ಬಂದವರು. ಬೆಂಗಳೂರಿಗೆ ಬರುವ ಮೊದಲು ಭಾರತದ ಬಗ್ಗೆ ಅದರಲ್ಲೂ ಬೆಂಗಳೂರು ಎಂದರೆ ಐಟಿ ಹಬ್, ಜತೆಗೆ ಇದೊಂದು ಉದ್ಯಾನ ನಗರ. ಅಷ್ಟೇ ಅಲ್ಲದೆ ಬೆಂಗಳೂರು ವಿದೇಶೀ ಉದ್ಯೋಗಿಗಳಿಗೆ ಸೂಕ್ತವಾದ ತಾಣ ಎಂಬುದನ್ನು ತಿಳಿದಿದ್ದರಂತೆ. ಇಲ್ಲಿ ಬಂದ ಮೇಲೆ ಇವೆಲ್ಲವೂ ನಿಜ ಎಂಬುದು ಸಾಬೀತಾಯಿತಂತೆ.

'ನಾವು ಬೆಂಗಳೂರಿಗೆ ಬರುವ ಮುನ್ನ ಇಂಗ್ಲೆಂಡ್, ಇಟಲಿ ಮತ್ತು ಸ್ವಿಟ್ಜರ್ಲಂಡ್‌ಗಳಲ್ಲಿ ಕೆಲಸ ಮಾಡಿದ್ದೆವು. ಈ ಎಲ್ಲ ದೇಶಗಳಲ್ಲಿ ಕೆಲಸದ ವಾತಾವರಣ ಭಿನ್ನ. ಅಲ್ಲಿನ ಸಾಮಾಜಿಕ ಜೀವನ, ಭಾಷೆ ಮತ್ತು ಸಂಸ್ಕೃತಿ ಇಲ್ಲಿಗಿಂತ ತುಂಬ ವ್ಯತ್ಯಾಸವಿದೆ. ಇಲ್ಲಿನ ಕೆಲಸಗಾರರಿಗೆ ಶ್ರದ್ಧೆ ಇದೆ, ಜೀವನ ಪ್ರೀತಿ ಇದೆ, ಉತ್ತಮ ಬಾಂಧವ್ಯ ಬೆಳೆಸಬೇಕು ಎಂಬ ಕಳಕಳಿ ಇದೆ, ಸಾಮಾಜಿಕ ಪ್ರಜ್ಞೆ ಜೀವಂತವಾಗಿದೆ. ಶ್ರಮಕ್ಕೆ ಬೆಲೆ ಇದೆ ಎಂಬುದನ್ನು ಜನ ಅರಿತಿದ್ದಾರೆ. ಸ್ನೇಹಕ್ಕೂ ಅಷ್ಟೇ ಮಹತ್ವ ಕೊಡುತ್ತಾರೆ ಎಂಬುದು ಇಲ್ಲಿಗೆ ಬಂದ ಕೆಲವೇ ತಿಂಗಳುಗಳಲ್ಲಿ ಗುರುತಿಸಿದ್ದೇನೆ' ಎಂದು ಇಲ್ಲಿನ ಜನಜೀವನದ ಬಗ್ಗೆ ತಮ್ಮದೇ ಆದ ವ್ಯಾಖ್ಯಾನ ನೀಡುತ್ತಾರೆ ಕೆವಿನ್.

'ಭಾರತ ಸಂಸ್ಕೃತಿಯಲ್ಲಿ ಶ್ರೀಮಂತವಾಗಿದೆ. ಧಾರ್ಮಿಕ ನಂಬಿಕೆ, ಬಹು ಧರ್ಮೀಯರು, ವಿಭಿನ್ನ ಹಬ್ಬಗಳ ಆಚರಣೆ ಎಲ್ಲವೂ ನಮಗೆ ಹೊಸ ಹೊಸ ಅನುಭವ ನೀಡುತ್ತಿವೆ. ಇಲ್ಲಿನ ಜನರ ಭಾವನೆಗಳೊಂದಿಗೆ ಹಬ್ಬ ಬೆಸೆದಿದೆ. ದಸರಾ ಮತ್ತು ದೀಪಾವಳಿ ಆಚರಣೆ ಅಂತೂ ಅದ್ಭುತ. ದೀಪಾವಳಿ ಬೆಳಕಿನ ಹಬ್ಬ ಜತೆಗೆ 'ಶಬ್ದದ ಹಬ್ಬ' ಎಂದೂ ಹೇಳಬಹುದು' ಎಂದು ನಗುತ್ತಾರೆ ದಲೀನ್.

### ರುಚಿ ಪ್ರಿಯರು

'ವಾರಾಂತ್ಯದಲ್ಲಿ ಬೇರೆ ಬೇರೆ ರೆಸ್ಟೋರೆಂಟ್‌ಗಳಿಗೆ ಹೋಗಿ ಊಟ ತಿಂಡಿಗಳ ರುಚಿ ನೋಡುವುದು ನಮಗೆ ಅತ್ಯಂತ ಪ್ರಿಯವಾದ ಹವ್ಯಾಸ. ನಾವು ಭಾರತೀಯ ಆಹಾರ ಪದ್ಧತಿಯನ್ನು ಬಹಳ ಪ್ರೀತಿಸುತ್ತೇವೆ. ಚಿಕನ್ ಟಿಕ್ಕಾ, ದಾಲ್, ತಂದೂರಿ ನಾನ್ ತುಂಬ ಇಷ್ಟ. 'ಹಾಟ್ ಅಂಡ್ ಸ್ಪೈಸಿ' ಫುಡ್‌ಗೇ ನಮ್ಮ ಆದ್ಯತೆ. ಜತೆಗೆ ಬೆಂಗಾಲಿ ಫುಡ್ ರುಚಿ ನೋಡಿದ್ದೇವೆ. ಕೋಲ್ಕತ್ತಾಗೆ ಹೋದಾಗ ಅನೇಕ ಹೊಸ ಹೊಸ ಸಿಹಿತಿಂಡಿಗಳನ್ನೂ ಸವಿದಿದ್ದೇವೆ, ಮಕ್ಕಳು ಚಿಕನ್ ಫ್ರೈ ಇಷ್ಟಪಡುತ್ತಾರೆ' ಎನ್ನುತ್ತಾರೆ ಕೆವಿನ್.

ದೇಶದ ಅನೇಕ ಭಾಗಗಳಿಗೆ ಪ್ರವಾಸ ಹೋಗಿದ್ದೇವೆ. ಜಮ್ಮು ಕಾಶ್ಮೀರ, ಲಡಾಖ್‌ಗೆ ಸ್ನೇಹಿತರ ಜತೆಗೆ ಪ್ರವಾಸ ಹೋದದ್ದು ಮರೆಯಲಾಗದ ಅನುಭವ. ಕುಟುಂಬದ ಸದಸ್ಯರ ಜತೆಗೆ ಕೇರಳ, ರಾಜಸ್ಥಾನದ ಉದಯಪುರ ಪ್ರವಾಸ ಸುಂದರ ನೆನಪು. ದೆಹಲಿ, ಆಗ್ರಾ, ಗೋವಾ ಮತ್ತೆ ಮತ್ತೆ ಹೋಗ ಬೇಕೆನಿಸುವ ಪ್ರವಾಸಿ ತಾಣಗಳು' ಎಂದು ಪುಳಕಗೊಳ್ಳುತ್ತಾರೆ ಕೆವಿನ್.

ಬೆಂಗಳೂರಿನ ಕಮರ್ಷಿಯಲ್ ಸ್ಟ್ರೀಟ್, ರಸೆಲ್ ಮಾರ್ಕೆಟ್, ಸಿಟಿ ಮಾರ್ಕೆಟ್‌ನಲ್ಲಿ ಸುತ್ತುವುದು, ಶಾಪಿಂಗ್ ಮಾಡುವುದು ದಲೀನ್‌ಗೆ ಇಷ್ಟವಂತೆ.

'ಬೆಂಗಳೂರಿಗೆ ಬಂದ ಹೊಸದರಲ್ಲಿ ಇಲ್ಲಿನ ಭಾಷೆ, ಸಂಸ್ಕೃತಿಗೆ ಹೊಂದಿಕೊಳ್ಳುವುದು ಕಷ್ಟವಾಗಿತ್ತು. ಆದರೆ ಈಗ ಹೊಂದಿಕೊಂಡಿದ್ದೇವೆ. ಇಲ್ಲಿನ ಜನ ಆಡುವ ಬಹು ಭಾಷೆ ಕೇಳಲು ಸೊಗಸಾಗಿದೆ. ಕನ್ನಡವನ್ನೂ ಮಾತನಾಡುವುದು ಕೇಳಿದ್ದೇವೆ. ಆದರೆ ಕಲಿತಿಲ್ಲ. ಅರ್ಥವೂ ಆಗದು. ಇಲ್ಲಿ ಕಳೆದ ಎಲ್ಲ ಕ್ಷಣಗಳೂ ಮಧುರವಾದದ್ದೇ. ಉದ್ಯೋಗದ ನಿಮಿತ್ತ ಇಲ್ಲಿಗೆ ಬಂದರೂ ಇಲ್ಲೇ ಖಾಯಂ ಆಗಿ ನೆಲೆ ನಿಲ್ಲುವ ಇರಾದೆ ನಮಗಿಲ್ಲ. ಇನ್ನೂ ಸ್ವಲ್ಪ ವರ್ಷ ಕೆಲಸ ಮಾಡಿ ಬಳಿಕ ದಕ್ಷಿಣ ಆಫ್ರಿಕಾದಲ್ಲೇ ನೆಲೆ ನಿಲ್ಲುವ ಯೋಜನೆ ನಮ್ಮದು' ಎನ್ನುತ್ತಾರೆ ಈ ದಂಪತಿ.

★ ಅವನೀಶ್